# ನಮ್ಮೂರ ಬದುಕು, ಸೊಗಸು

**ಒಂದನೇ ಪುಟದಿಂದ...**

ಸ್ಟ್ರೀಟ್ ಫೋಟೊಗ್ರಫಿಗೆ ಅತ್ಯುತ್ತಮ ಗುಣಮಟ್ಟದ ಕ್ಯಾಮೆರಾಗಳು ಬೇಕೆಂದಿಲ್ಲ. ಕ್ಯಾಮೆರಾ ಬಳಕೆ ತಂತ್ರ ಗೊತ್ತಿದ್ದರೆ, ಸಾಧಾರಣ ಕ್ಯಾಮೆರಾದಲ್ಲೇ ಫೋಟೊಗ್ರಫಿ ಮಾಡಬಹುದು' ಎಂಬುದು ಸುನಿಲ್ ಅಭಿಪ್ರಾಯ.

'ಈ ಹಿಂದೆ ವಾರಾಣಸಿಗೆ ಹೋಗಿದ್ದಾಗ ಅಲ್ಲಿ ಒಂದು ಕಡೆ ಸ್ಮಶಾನ, ಇನ್ನೊಂದು ಕಡೆ ದೇವರಿಗೆ ದೀಪ ಬೆಳಗುತ್ತಿರುವ ಭಕ್ತರ ಚಿತ್ರ ತೆಗೆದಿದ್ದೆ. ಈ ಫೋಟೊಗಳಲ್ಲಿ ಭಾವನೆಗಳ ಮಿಶ್ರಣ ಇರುತ್ತದೆ. ಮುಖಭಾವ ಗ್ರಹಿಸುವುದರ ಜೊತೆಗೆ ಹಿನ್ನೆಲೆಯನ್ನು ಕಾವ್ಯಾತ್ಮಕವಾಗಿ ಒಂದೇ ಫ್ರೇಮ್‌ನಲ್ಲಿ ಸೆರೆಹಿಡಿಯುವುದನ್ನೂ ಅರಿತಿರಬೇಕು. ಇಂಥ ದೃಶ್ಯಗಳು ಸಿಕ್ಕಾಗ ಮನಸ್ಸಿಗೆ ಆಪ್ತವೆನಿಸುತ್ತವೆ' ಎನ್ನುತ್ತಾರೆ ಹೇಮಾ.



ಹೇಮಾ ನಾರಾಯಣ

'ಒಬ್ಬ ಮಹಿಳೆಯಾಗಿ ಸ್ಟ್ರೀಟ್ ಫೋಟೊಗ್ರಫಿ ಕೊಂಚ ಕಷ್ಟದ್ದೇ' ಎಂದು ಹೇಳುವ ಅವರು, 'ಯಾವುದಾದರೂ ಮಾರ್ಕೆಟ್‌ನಲ್ಲಿ ಕ್ಯಾಮೆರಾ ಕುತ್ತಿಗೆಗೆ ಹಾಕಿಕೊಂಡು ಹೋದಾಕ್ಷಣ ಜನ ಅಲರ್ಟ್ ಆಗಿ ಬಿಡುತ್ತಾರೆ. ಸ್ವಲ್ಪ ಸಮಯ ಅಲ್ಲೇ ಇದ್ದು, ಸುಮ್ಮನಾಗಿ ಬಿಡುತ್ತೇನೆ. ಸೂಕ್ತ ಜಾಗದಲ್ಲಿ ಕುಳಿತುಕೊಂಡು ಅಲ್ಲಿನ ಪರಿಸರವನ್ನು ಅವಲೋಕಿಸುತ್ತೇನೆ. ನಂತರ ಮನಸ್ಸಿನಲ್ಲೇ ಫ್ರೇಮ್ ಶುರುವಾಗಿ ಬಿಡುತ್ತದೆ. ಜನರು ಗಮನ ನನ್ನ ಕಡೆ ಇಲ್ಲದಾಗ ಫೋಟೊಗಳನ್ನು ಕ್ಲಿಕ್ಕಿಸುತ್ತೇನೆ. ಇನ್ನು ಸಾಮಾನ್ಯರಂತೆ ಮಾರುಕಟ್ಟೆಗೆ ಹೋಗಿ ಅಲ್ಲಿ ಫೋಟೊ ತೆಗೆಯುವುದು ಮತ್ತೊಂದು ಬಗೆ ಟ್ರಿಕ್. ಇಂತಹ ನೂರಾರು ಟ್ರಿಕ್‌ಗಳನ್ನು ಸ್ಟ್ರೀಟ್ ಫೋಟೊಗ್ರಫಿಯಲ್ಲಿ ಅನುಸರಿಸಬೇಕಾಗುತ್ತದೆ' ಎನ್ನುವ ತಂತ್ರವನ್ನು ಅವರು ಅನುಭವದಿಂದ ಕಂಡುಕೊಂಡಿದ್ದಾರೆ. ❖



ಮಮತಾ ಶ್ರೀವತ್ಸ ತೆಗೆದ ಬಲೂನು ಮಾರುವ ಹುಡುಗನ ಚಿತ್ರ



ಹೇಮಾ ನಾರಾಯಣ ತೆಗೆದ ಪಾದುಕೆಯ ಚಿತ್ರ

## ಹಿನ್ನೆಲೆ ಅರಿತಿದ್ದರೆ ಸುಲಭ



ನಾನು ಬೆಂಗಳೂರಿನಲ್ಲೇ ಹುಟ್ಟಿ ಬೆಳೆದವಳು. ಹೀಗಾಗಿ ಇಲ್ಲಿನ ಯಾವ ಬೀದಿಯಲ್ಲಿ ಫೋಟೊಗ್ರಫಿ ಮಾಡಿದರೆ ಉತ್ತಮ ಎಂಬುದು ನನಗೆ ಗೊತ್ತಿದೆ. ಒಂದು ನಗರದ ಹಿನ್ನೆಲೆ, ಅಲ್ಲಿನ ಸಂಸ್ಕೃತಿ ಬಗ್ಗೆ ತಿಳಿದುಕೊಂಡು ಅದನ್ನೇ ನನ್ನ ಚಿತ್ರಗಳಲ್ಲಿ ಸೆರೆಹಿಡಿಯಲು ಬಯಸುತ್ತೇನೆ. ಹಬ್ಬ, ಜಾತ್ರೆ, ಆಚರಣೆಗಳನ್ನು ದಾಖಲು ಮಾಡಲು ನನಗೆ ಇಷ್ಟ. ಎರಡು ವರ್ಷದ ಹಿಂದೆ ಕಡಲೆಕಾಯಿ ಪರಿಷೆಯಲ್ಲಿ ಬಾಲಕನೊಬ್ಬ ಕಡಲೆಕಾಯಿ ಮಾರಾಟ ಮಾಡುತ್ತಿದ್ದ. ಆದರೆ ಆತನ ಗಮನ ಪಕ್ಕದಲ್ಲಿ ಮಾರುತ್ತಿದ್ದ ಬಲೂನ್‌ಗಳ ಮೇಲಿತ್ತು. ನಾನು ಆ ದೃಶ್ಯವನ್ನು ಕ್ಯಾಮೆರಾದಲ್ಲಿ ದಾಖಲಿಸಿದೆ. ಆದರೆ ಇಂದಿಗೂ ಆ ಚಿತ್ರ ನೋಡಿದಾಗಲೆಲ್ಲಾ ನನ್ನ ಮನಸು ಆರ್ದ್ರವಾಗುತ್ತೆ.

–**ಮಮತಾ ಶ್ರೀವತ್ಸ**, ಜಯನಗರ
ಟೆಕ್ನಿಕಲ್ ರೈಟರ್, ಒರಾಕಲ್ ಕಂಪೆನಿ